**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್.ರವಿಕುಮಾರ್. ವಿ.ಪ.ಮಾ.ಸ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ರವರು ಪ್ರಸ್ತಾಪಿಸಿರುವ ನಿಯಮ- 330ರ ಗಮನ ಸೆಳೆಯುವ ಸೂಚನೆಗೆ**

**ಉತ್ತರ**

**ಪ್ರಶ್ನೆ:** **ಚಿಕ್ಕಮಗಳೂರು ಜಿಲ್ಲೆಯಲ್ಲಿ ಜನವರಿ 24 2026 ರಂದು ತರೀಕೆರೆ ತಾಲ್ಲೂಕಿನ ಪೊಲೀಸರು ಭಾಜಪದ ಪ್ರಮುಖ ನಾಯಕರಾದ ಶ್ರೀ ವಿಕಾಸ್ ಪುತ್ತೂರು ರವರಿಗೆ ಅವರು ಭಾಗವಹಿಸಬೇಕಾಗಿದ್ದ ಹಿಂದೂ ಸಮಾಜೋತ್ಸವ ಮೆರವಣಿಗೆಯ ಭಾಷಣಕ್ಕೂ ಮುನ್ನ "ದ್ವೇಷ ಭಾಷಣ ಮತ್ತು ದ್ವೇಷದ ಅಪರಾಧಗಳ (ತಡೆಗಟ್ಟುವಿಕೆ) ವಿಧೇಯಕ, 2025" ರ ಅಡಿಯಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂಬುದಾಗಿ ಎಚ್ಚರಿಕೆಯ ನೋಟೀಸ್ ಜಾರಿ ಮಾಡಿರುತ್ತಾರೆ ಸದರಿ ವಿಧೇಯಕವು ಇನ್ನೂ ರಾಜ್ಯಪಾಲರ ಅನುಮೋದನೆಗೆ ಬಾಕಿ ಇದ್ದು ಅಧಿಸೂಚನೆಯೂ ಹೊರಬಿದ್ದಿರುವುದಿಲ್ಲ. ಅಸ್ತಿತ್ವದಲ್ಲಿಯೇ ಇಲ್ಲದ ಕಾನೂನನ್ನು ಹಾಗೂ ಪೊಲೀಸ್ ವ್ಯವಸ್ಥೆಯನ್ನು ಬಳಸಿಕೊಂಡು ವಿರೋಧಿಗಳನ್ನು ಬೆದರಿಸುವ ಈ ಘಟನೆಯು ಸಾರ್ವಜನಿಕರಲ್ಲಿ ತೀವ್ರ ಆತಂಕವನ್ನು ಉಂಟುಮಾಡಿದ್ದು, ಸದರಿ ವಿಧೇಯಕವು ಕಾಯ್ದೆಯಾಗಿ ರೂಪುಗೊಳ್ಳುವ ಮೊದಲೇ ಅದನ್ನು ಜಾರಿಗೆ ತರಲು ಪೊಲೀಸ್ ಇಲಾಖೆಗೆ ಅಧಿಕಾರ ನೀಡಿದವರ ಕುರಿತು ಮತ್ತು ಇಂತಹ ಅಸಂವಿಧಾನಿಕ ಕೃತ್ಯಗಳು ಮರುಕಳಿಸದಂತೆ ಕ್ರಮ ಕೈಗೊಳ್ಳುವುದರ ಜೊತೆಗೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮದ ಕುರಿತು.**

**ಉತ್ತರ:** ದಿನಾಂಕ 24.01.2026 ರಂದು ಸಂಜೆ 4:00 ಗಂಟೆಗೆ ತರೀಕೆರೆ ಪಟ್ಟಣದ ರಂಗಮಂದಿರದಲ್ಲಿ ಹುಣಸಘಟ್ಟ ಶ್ರೀ ಶ್ರೀ ಶ್ರೀ ಗುರುಮೂರ್ತಿ ಶಿವಾಚಾರ್ಯ ಸ್ವಾಮೀಜಿಗಳು ಇವರ ನೇತೃತ್ವದಲ್ಲಿ ಹಿಂದೂ ಸಮಾಜೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಈ ಸಮಯದಲ್ಲಿ ಕಾರ್ಯಕ್ರಮದ ದಿಕ್ಸೂಚಿ ಭಾಷಣಕಾರರಾಗಿ ಶ್ರೀ ವಿಕಾಸ್ ಪುತ್ತೂರುರವರು ಆಗಮಿಸುವುದಾಗಿ ತಿಳಿದು ಬಂದ ಹಿನ್ನೆಲೆಯಲ್ಲಿ, ಚಿಕ್ಕಮಗಳೂರು ಜಿಲ್ಲೆಯು ಮತೀಯವಾಗಿ ಸೂಕ್ಷ್ಮ ಜಿಲ್ಲೆ ಹಾಗೂ ತರೀಕೆರೆ ಪಟ್ಟಣವು ಮತೀಯವಾಗಿ ತುಂಬಾ ಸೂಕ್ಷ್ಮತೆಯಿಂದ ಕೂಡಿರುವುದರಿಂದ, ತರೀಕೆರೆಯಲ್ಲಿ ಯಾವುದೇ ಸಮುದಾಯದ ಕಾರ್ಯಕ್ರಮಗಳು ನಡೆದರೂ ಸಹ ಸಾರ್ವಜನಿಕರ ಶಾಂತಿ ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಪ್ರಮುಖ ಭಾಷಣಕಾರರಿಗೆ ತಿಳುವಳಿಕೆ ನೋಟಿಸ್ ನೀಡಲಾಗುತ್ತಿರುತ್ತದೆ.

ಈ ಹಿಂದೆ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ನಗರ, ಮೂಡಿಗೆರೆ ಮತ್ತು ಆಲ್ದೂರು ಹಾಗೂ ಇತರೆ ಪಟ್ಟಣಗಳಲ್ಲಿ ಹಿಂದೂಪರ ಸಂಘಟನೆಗಳು ಶ್ರೀ ಶರಣ್ ಪಂಪ್‌ವೆಲ್, ವಿ.ಹೆಚ್.ಪಿ. ಪ್ರಾಂತ ಸಹಕಾರ್ಯದರ್ಶಿ, ಇವರನ್ನು ಆಹ್ವಾನಿಸಿ ಬೈಠಕ್ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದ ಸಂದರ್ಭದಲ್ಲಿ ಸದರಿಯವರು ಪ್ರಚೋದನಕಾರಿ ಭಾಷಣ ಮಾಡಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವ ಸಂಭವನೀಯ ಮಾಹಿತಿ ಇದ್ದುದರಿಂದ ಮುನ್ನೆಚ್ಚರಿಕಾ ಕ್ರಮವಾಗಿ ಬಿ.ಎನ್.ಎಸ್.ಎಸ್ ಕಲಂ 163 ರನ್ವಯ ದಿನಾಂಕ 06.07.2025 ರಿಂದ 04.08.2025 ರವರೆಗೆ 30 ದಿವಸಗಳ ನಿರ್ಬಂಧಕಾಜ್ಞೆಯನ್ನು ಹೊರಡಿಸಿ ಜಿಲ್ಲಾಧಿಕಾರಿಗಳು ದಿನಾಂಕ 05.07.2025 ರಂದು ಆದೇಶ ಹೊರಡಿಸಲಾಗಿರುತ್ತದೆ.

ಆದುದರಿಂದ, ದಿನಾಂಕ 24.01.2026 ರಂದು ತರೀಕೆರೆ ಪಟ್ಟಣದಲ್ಲಿ ನಡೆಯಲಿದ್ದ ಹಿಂದೂ ಸಮಾಜೋತ್ಸವ ಕಾರ್ಯಕ್ರಮದ ಸಮಯದಲ್ಲಿಯೂ ಸಹ ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದ ಯಾವುದೇ ಅಹಿತಕರ ಘಟನೆಗಳು ನಡೆಯಬಾರದೆಂದು ಮುಂಜಾಗ್ರತಾ ಕ್ರಮವಾಗಿ ಕಾರ್ಯಕ್ರಮದ ಸಂಘಟಕರಿಗೆ ಹಾಗೂ ಪ್ರಚೋದನಕಾರಿ ಭಾಷಣ ಮಾಡುವ ಇತಿಹಾಸ ಹೊಂದಿದ್ದ ಸದರಿ ಕಾರ್ಯಕ್ರಮದ ದಿಕ್ಸೂಚಿ ಭಾಷಣಕಾರರಾಗಿ ಆಗಮಿಸಲಿದ್ದ ಶ್ರೀ ವಿಕಾಸ್ ಪುತ್ತೂರು ರವರಿಗೆ ತಿಳುವಳಿಕೆ ನೋಟಿಸ್ ನೀಡಲಾಗಿರುತ್ತದೆ. ಸದರಿ ನೋಟಿಸನಲ್ಲಿರುವ 4 ನೇ ಅಂಶದಲ್ಲಿ ಕಾಯ್ದೆಯಾಗಿ ಜಾರಿಗೆ ಬಂದಿರದ ದ್ವೇಷ ಭಾಷಣ ಮಸೂದೆ-2025 ಅನ್ನು ಕಾಯ್ದೆ ಎಂದು ತಪ್ಪಾಗಿ ನಮೂದಿಸಿ ನೋಟಿಸ್ ನೀಡಲಾಗಿರುತ್ತದೆ.

ಶ್ರೀ ರಾಮಚಂದ್ರನಾಯಕ್, ಪೊಲೀಸ್ ನಿರೀಕ್ಷಕರು, ತರೀಕೆರೆ ಪೊಲೀಸ್ ಠಾಣೆ ರವರು ಸದರಿ ಮಸೂದೆಯು ಹಾಲಿ ಕಾಯ್ದೆಯಾಗಿ ಜಾರಿಗೆ ಬಾರದಿದ್ದರೂ ಮಾಹಿತಿಯನ್ನು ಪಡೆದುಕೊಳ್ಳದೆ ಹಾಗೂ ಮೇಲಾಧಿಕಾರಿಗಳಿಂದಲೂ ಸಹ ಮಾಹಿತಿಯನ್ನು ಪಡೆಯದೆ ದ್ವೇಷ ಭಾಷಣ ಮಸೂದೆ-2025 ಅನ್ನು ಕಾಯ್ದೆ ಎಂದು ನೋಟಿಸ್‌ನಲ್ಲಿ ತಪ್ಪಾಗಿ ನಮೂದಿಸಿದ್ದರಿಂದ, ಡಿ.ವೈ.ಎಸ್.ಪಿ ತರೀಕೆರೆ ಉಪ-ವಿಭಾಗ ರವರು ನೀಡಿದ ವರದಿಯ ಮೇರೆಗೆ, ಶ್ರೀ ರಾಮಚಂದ್ರನಾಯಕ್, ಪೊಲೀಸ್ ನಿರೀಕ್ಷಕರು, ತರೀಕೆರೆ ಪೊಲೀಸ್ ಠಾಣೆ ರವರಿಗೆ ಕೆ.ಎಸ್.ಪಿ(ಡಿ.ಪಿ) ನಿಯಮಾವಳಿಗಳು-1965/1989 ಮತ್ತು ತದನಂತರದ ತಿದ್ದುಪಡಿ ನಿಯಮಾವಳಿಗಳು-2022 ರ ನಿಯಮ-7 ರಡಿಯಲ್ಲಿ ದಿನಾಂಕ 25.01.2026 ರಂದು ದೋಷಾರೋಪಣಾ ಪತ್ರವನ್ನು ಜಾರಿಗೊಳಿಸಿದ್ದು, ಆರೋಪಿತರಿಂದ ಸಮಜಾಯಿಸಿ ಸ್ವೀಕೃತವಾದ ನಂತರ ಶಿಸ್ತು ಪ್ರಕ್ರಿಯೆಯಲ್ಲಿ ಸಕ್ಷಮ ಶಿಸ್ತು ಪ್ರಾಧಿಕಾರವಾದ ಪೊಲೀಸ್ ಅಧೀಕ್ಷಕರು ಚಿಕ್ಕಮಗಳೂರು ಜಿಲ್ಲೆ ಇವರು ಪರಾಮರ್ಶಿಸಿ ಮುಂದಿನ ಕ್ರಮ ವಹಿಸುತ್ತಾರೆ.

ಹೆಚ್‌ಡಿ 74 ಎಸ್‌ಎಸ್‌ಟಿ 2026

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು.